ನಿಲ್ಲುವವರಲ್ಲ; ಕೆಸುಗಿಡದ ಕಾಲಿಗೆ ಕರುಕಟ್ಟಿ ಬಂದವರಂತೆ, ಅವಸರ ಮಾಡ್ತಾ ಇದ್ದೀರಿ... ಆಯ್ತು ಹೊರಡಿ, ಹೊರಡಿ... ಮಧ್ಯಾಹ್ನದ ಮಹಾಪೂಜೆ ಆಗುವ ಮೊದ್ಲೇ ನೀವೂ ಕಟೀಲು ತಲುಪಿಬಿಡಿ; ಆ ಉಳ್ಳಾಲ್ತಿಯ ದಯೆ ನಿಮ್ಗೆ ಇರ್ಲೇಬೇಕು... ಕಟೀಲಿನಿಂದ ಹಿಂದೆ ಬರುವಾಗ ರಾತ್ರಿ ಇಲ್ಲೇ ಇದ್ದು ನಾಳೆ ಹೋಗುವಿರಂತೆ...' ಎಂದು ಹೇಳಿದಾಗ ಇಬ್ಬರೂ,

'ಇಲ್ಲ ಮಾಮ... ಅಲ್ಲಿ ತುಂಬಾ ಕೆಲಸ ಇದೆ. ಇನ್ನೊಂದು ಸಲ ಬಂದ್ರೆ... ರಾತ್ರಿಯಿಡೀ ಮಲಕ್ಕೊಂಡು ನಿಮ್ಮ ಮಾತು ಕೇಳ್ಲೇ ಬೇಕು ನಾವು...' ಎಂದು ಹೇಳುತ್ತಾ ಗುತ್ತಿನೊಡೆಯರ ಕಾಲಿಗಡ್ಡ ಬಿದ್ದು ಆಶೀರ್ವಾದ ಪಡೆದುಕೊಂಡು ಆನೆಬಾಗಿಲು ದಾಟಿದ್ದರು.

ಇಬ್ಬರೂ ಕಟೀಲಿಗೆ ಬರುವಾಗ ಸರಿಯಾಗಿ ದೇವಿಗೆ ಮಂಗಳಾರತಿ ನಡೆಯುತ್ತಿತ್ತು. ಮಂಗಳಾರತಿ ಆಗಿ ತೀರ್ಥಪ್ರಸಾದ ತೆಗೆದುಕೊಂಡ ನಂತರ ಮಾರಪ್ಪಾಳ್ವರು ತಾವು ಬಂದಿರುವ 'ಓಲೆ'ಯನ್ನು ದೊಡ್ಡಸ್ರಣ್ಣರಿಗೆ ಕಳಿಸಿದೊಡನೆ, ಅಸ್ರಣ್ಣರು ಅವರಿದ್ದಲ್ಲಿಗೆ ಬಂದು 'ಪ್ರತ್ಯಕ್ಷ'ರಾಗಿದ್ದರು.

ದೊಡ್ಡ ಅಸ್ರಣ್ಣರು ಕೂಡಾ ತಿಬಾರುಗುತ್ತಿನ ಒಡೆಯರು ಹೇಳಿದ್ದ ಮಾತುಗಳನ್ನೇ ಮತ್ತೆ ಹೇಳುತ್ತ ಇನ್ನೊಂದು ಮನಕರಗುವ ಮಾತನ್ನೂ ಹೇಳಿದ್ದರು.

'ನನ್ನ ಬಾಲ್ಯದಲ್ಲಿದ್ದ ಆ ಕಾಡು ಈಗ ಎಲ್ಲಿದೆ ಮಾರಾಯ?! ನನ್ನ ಬುದ್ಧಿ ಬೆಳೆಯುತ್ತಿದ್ದಂತೆ... ನನ್ನ ಕಣ್ಣೆದುರಿಗೇ... ಬಲ ಇದ್ದವರೆಲ್ಲ ತಮ್ಮ ತಮ್ಮ ಕುಮೇರಿ ಮುಂದಿದ್ದ ದಟ್ಟ ಕಾಡನ್ನು, ಕಡಿದೂ ಕಡಿದು... ಗದ್ದೆ ಮಾಡತೊಡಗಿದ್ರು. ಕೆಲವರು ಕಾಡು ಕಡಿದು ತೆಂಗಿನ ತೋಟ ಇಟ್ರೆ. ಇನ್ನು ಕೆಲವರು ಅಡಿಕೆ ತೋಟ ಇಟ್ರು. ಇನ್ನೂ ಕೆಲವರು ತೋಟ ಮಾಡಿದ್ರೆ ಸಾಲದು ಅಂತಾ... ಕಾಡು ಕಾಡುಗಳನ್ನೇ ಮೋಪಿಗೆ ಮಾರಿದ್ರು. ನಾನು ಸಣ್ಣವನಿರುವಾಗ ಈ ಬಿಳಿಕೇಪಳದ ಮರಗಳನ್ನು ಎಷ್ಟು ನೋಡಿದ್ದೆ ಗೊತ್ತಾ? ಎಲ್ಲರೂ ಗನಾಗಟ್ಟಿ ಮರ ಅಂತ ಮರಗಳನ್ನು ಕಡಿದದ್ದೇ ಕಡಿದದ್ದು, ಮಾರಿದ್ದೇ ಮಾರಿದ್ದು, ಅವುಗಳನ್ನು ಮನೆಮಠಕ್ಕೂ ಬಳಸಿಕೊಂಡ್ರು. ಈಗ ದೇವ್ರ ಕಾರ್ಯಕ್ಕೆ ಸಿಗಬೇಕು ಅಂತ ನಾವು ಊರೂರು ಅಲೆದ್ರೆ ಅಂವು ಎಲ್ಲಿ ಸಿಗುತ್ತೆ!? ಅಂವುಗಳನ್ನು ನಿರ್ಸಂತಾನ ಮಾಡಿ ಹಾಕಿದವ್ರು ನಾವೇ ಅಲ್ವೇ? ಅಂವು ಈಗ ಸಿಗುದಾದ್ರೆ ಮೂಡಾಲ್ಗಿನ ದಟ್ಟಕಾಡಲ್ಲಿ ಮಾತ್ರ ಸಿಗಬಹುದು ನೋಡಿ. ಅದನ್ನು ನಾವು ನೀರುಗೊಬ್ಬರ ಹಾಕಿ ಬೆಳೆಸುದಕ್ಕೆ ಬರೋದೆ ಇಲ್ಲ. ಮರದ ತಿರುಳು ಬಲೀಬೇಕಾದ್ರು ಬಹಳ ವರ್ಷವೇ ಬೇಕು... ಅಂತಹ ಮರ ಅದು. ನೀವು ಈಗ ಕೊಡಿಮರಕ್ಕೆ ಆ ಮರವನ್ನು ಹುಡುಕುವ ಬದಲು, ಅಷ್ಟೇ ಶ್ರೇಷ್ಠವಾದ ತೇಗದ ಮರವನ್ನೇ ಹಾಕಿ. ಏನೂ ತೊಂದರೆ ಆಗಲ್ಲ; ನಿಮ್ಮ ದೈವಕಾರ್ಯದಲ್ಲಿ ಉಳ್ಳಾಲ್ತಿಯ ಆಶೀರ್ವಾದ ಇದ್ದೇ ಇದೆ...' ಎಂದು ಹೇಳಿ, ದೇವರಪ್ರಸಾದ ಕೊಟ್ಟು ಇಬ್ಬರನ್ನು ಆಶೀರ್ವದಿಸಿ ಕಳುಹಿಸಿಕೊಟ್ಟರು.

ಇನ್ನೇನಂತೆ! ದೇವಪ್ಪ ಶೆಟ್ರು ನಿರಾಳರಾಗಿ ಕಟೀಲಿನ ಗಂಧ ಪ್ರಸಾದದ ಜತೆಗೆ ಮನೆಗೆ ಹಿಂದಿರುಗಿ ಮತ್ತೆ ಕಾಲಿಗೆ 'ಚಕ್ರ ಕಟ್ಟಿಕೊಂಡರು'. ಕಟೀಲಿನಿಂದ ಬಂದ ಮರುದಿನವೇ ಅವರು ಮಾರಪ್ಪ ಆಳ್ವರ ಜೊತೆಗೂಡಿ ಮತ್ತೆ ಹೊರಟಿದ್ದು ತನ್ನ ಸೋದರಳಿಯ ಸಾಧು ಶೆಟ್ಟಿಯ ಮಿತ್ತಬೈಲಿಗೆ. ಒಳದಾರಿಯಾಗಿ ಬೈಲುಗಳನ್ನು ದಾಟಿಕೊಂಡು ಮಿತ್ತಬೈಲಿಗೆ ಹೋಗುವುದಾದರೆ ಬರಿ ಕಾಲುಗಂಟೆಯ ದಾರಿ. ಮಣ್ಣಿನ ದಾರಿ ಹಿಡಿದು ಹೋಗುವುದಾದರೆ ಅರ್ಧಗಂಟೆ ಬೇಕೇ ಬೇಕು.

ದೇವಪ್ಪ ಶೆಟ್ಟರ ಅಕ್ಕನ ಮಗ ಸಾಧು ಶೆಟ್ಟಿ ದೈವದ ಕೆಲಸ ಶುರು ಮಾಡುವಾಗಲೇ ಹೇಳಿದ್ದ: 'ಮಾಮಣ್ಣ ಒಂದು ವೇಳೆ ನಿಮ್ಮ ದೇವದ ಕೊಡಿಮರಕ್ಕೆ ತೆಕ್ಕಿದ(ಸಾಗುವಾನಿ) ಮರವೇ ಹಾಕುದಾದ್ರೆ... ನನ್ನ ಬೆಟ್ಟಿನದ್ದೇ ಹಾಕಬೆಕು.; ಅದು ದೈವಕ್ಕೆ ನನ್ನ ಕಾಣಿಕೆ' ಅಂತ. ನಿನ್ನೆ ಕಟೀಲಿನಿಂದ ಹಿಂದಿರುಗುವಾಗಲೇ ಶೆಟ್ಟರು ಹೇಗೂ ಅಳಿಯ ಸಾಧುಶೆಟ್ಟಿ ಹೇಳಿದ್ದಾನೆ, ತೇಗದ ಮರ ತನ್ನ ಬೆಟ್ಟಿನಲ್ಲೇ ಇದೆಯೆಂದು. ನಾಳೆ ಭಾವ ಮಾರಪ್ಪ ಆಳ್ವರೊಂದಿಗೆ ಹೋಗಿ ಒಮ್ಮೆ ನೋಡಿ ಬಂದರಾಯಿತು ಎಂದು ಮನದಲ್ಲೇ ಲೆಕ್ಕ